

ನನ್ನ ಪ್ರಾಜೆಕ್ಟ್‌ಗೆ ಸಹಾಯ ಮಾಡಿದ ಕ್ಷಣಗಳು, ಅನಂತರ ನಾವು ಒಟ್ಟಿಗೆ ಸೇರಿ ಆಧುನಿಕ ಟೆಕ್ ಪಾರ್ಕ್‌ಗಳ ನಕ್ಷೆ ತಯಾರಿಸಿದೆವು...' ಭವಿತಾ 'ಆ ದಿನಗಳನ್ನು' ನೆನಪಿಸುವಾಗ ರಜತ್ ಮನದಲ್ಲೇ ಆ ಸಮಯದ ಬ್ಲೂ ಪ್ರಿಂಟ್ ತಯಾರಿಸ ತೊಡಗಿದ. ತಾವಿಬ್ಬರೂ ಮುಂದೆಯೂ ಸಹ ಜೀವನದಲ್ಲಿ ಜೊತೆಯಾಗಿ ಸಾಗುವ ನಿರ್ಧಾರ ಕೈಗೊಂಡಾಗ ಭವಿಷ್ಯದ ಇಣುಕು ನೋಟವೂ ಸಿಕ್ಕಿತ್ತು. ನಕ್ಷೆ ತಯಾರಿಸಲು ಹೆಸರಾಂತ ಸಂಘ ಸಂಸ್ಥೆಗಳು ತಮ್ಮ ಅವಶ್ಯಕತೆಗಳನ್ನು ಪ್ರಸ್ತಾಪಿಸಿ ಬೇಡಿಕೆ ಇಟ್ಟಾಗ ಬೇಡಿಕೆಗೆ ಸ್ಪಂದಿಸಿ ಕ್ಷೇತ್ರ ಸಮೀಕ್ಷೆಯ ನಿರ್ವಹಣೆ ಭವಿತಾ ತೆಗೆದುಕೊಂಡಿದ್ದರೆ ರಜತ್ ಅದನ್ನು ನಕ್ಷೆಗೆ ಸಮೀಕರಿಸಿ 3ಡಿ ಆಯಾಮದ ವಿಸ್ತರಣೆ ಒದಗಿಸುತ್ತಿದ್ದ.

ಒಮ್ಮೆ ಹಕ್ಕಿಗಳ ವಲಸೆ ಪದ್ಧತಿಯನ್ನು ಖಂಡಗಳಲ್ಲಿ ಅದರ ಜಾಡು ಹಿಡಿದು ತಯಾರಿಸುವಾಗ ಅದರ ಸಂತಾನೋತ್ಪತ್ತಿ ನಡೆದ ಜಾಗ, ಚಳಿಗಾಲದಲ್ಲಿ ಅದರ ತಂಗುವಿಕೆ, ಬೇಸಿಗೆ ಕಾಲದಲ್ಲಿ ನೀರನ್ನು ಹುಡುಕಿ ನದಿ ಮೂಲಕ್ಕೆ ತಂಡೋಪತಂಡವಾಗಿ ಸಾಗುತ್ತಿದ್ದ ಸ್ಥಳಗಳು... ಇತ್ಯಾದಿ ನಕ್ಷೆಯಲ್ಲಿ ಬಿಡಿಸಲು ತಿಂಗಳುಗಟ್ಟಲೇ ಸಮಯ ಹಿಡಿದಿತ್ತು. ಸಾಂಪ್ರದಾಯಿಕ ಭೂಪಟ ತಯಾರಿಕೆಗಿಂತ ಭಿನ್ನವಾಗಿ ರಜತ್ ಸರ್ಕಾರಕ್ಕೆ 'ಅಪಾಯಕರ' ಸ್ಥಳಗಳ ನಕ್ಷೆ ಒದಗಿಸುವ ಪ್ರಾಜೆಕ್ಟ್‌ಗೆ ಕೈ ಹಾಕಿದಾಗಲಂತೂ ಸಂಬಂಧಪಟ್ಟ ಸರ್ಕಾರಿ ಕಚೇರಿಗಳಿಗೆ ಎಡತಾಗುವುದೇ ಭವಿತಾಳ ಕೆಲಸವಾಗಿತ್ತು. ಅವಳ ಸವೆದ ಪಾದರಕ್ಷೆ ಬಿಸುಟು ಹೊಸದೊಂದನ್ನು ಧರಿಸುವಂತಾಗಿತ್ತು. ಸರ್ಕಾರಿ ಅಧಿಕಾರಿಗಳ ಧೋರಣೆಗೆ ತಕ್ಕಂತೆ ಅವರ ಅಹವಾಲುಗಳನ್ನು ಆಲಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಅಗತ್ಯ ಪೂರೈಸಬೇಕಿತ್ತು.

ತಲೆಬುರುಡೆ ಅಪಾಯದ ಸೂಚನೆಯನ್ನು ನಕ್ಷೆಯುದ್ದಕ್ಕೂ ಮುದ್ರಿಸುವ ಬದಲು 'ಅಪಾಯಕಾರಿ ವಲಯ'ಗಳೆಂದು ಕೆಂಪು ಬಣ್ಣದಲ್ಲಿ ತೋರಿಸುವುದೇ ಉಚಿತವಾಗಿತ್ತು. ಅದರ ವಿವಿಧ ಹಂತಗಳನ್ನು ತಯಾರಿಸಲು ಭವಿತಾ ತಿರುಗಾಡದ ಇಲಾಖೆಗಳಿರಲಿಲ್ಲ. ಯಾವ ರೀತಿ ಅಪಾಯಕಾರಿ ಎಂಬುದರ ವಿವರ ಪಡೆಯುವಾಗಲೇ ಸುರಕ್ಷಿತ ಕ್ರಮಗಳು ಹಾಗೂ ತಾಣದ ಬಗ್ಗೆ ಸಹ ಮಾಹಿತಿ ಶೇಖರಿಸಿ ಹಸಿರು ನಕ್ಷೆ ತಯಾರಿಸಲು ಅನುವು ಮಾಡಿಕೊಟ್ಟಿದ್ದಳು. ಈ ಸಂಸ್ಥೆಗೆ ಗ್ರಾಹಕರು ಹಾಗೂ ಪ್ರಾಜೆಕ್ಟ್‌ಗಳ ಸಂಖ್ಯೆ ಹೆಚ್ಚಲು ಭವಿತಾಳ ಕೊಡುಗೆ ಹೆಚ್ಚಿತ್ತು. ಅದರ ಬಳಿಕ ತಂತ್ರಜ್ಞರು ನಿರ್ವಹಿಸಿದ ಕೆಲಸ ಪರಿಪೂರ್ಣವಾಗಲು ರಜತ್ ಬಳಿ ಬರುತ್ತಿತ್ತು. 3ಡಿ ಸಮೀಕರಣ ಸವಾಲಿನದ್ದಾಗಿದ್ದು ತಲೆಕೆಡಿಸಿಕೊಂಡು ಅದಕ್ಕೆ ಪೂರ್ಣತೆ ಒದಗಿಸಲು ಶ್ರಮಿಸುತ್ತಿದ್ದ. ಅವನ ಕೆಲಸಗಳೆಲ್ಲವೂ ಇಂತಹದ್ದೇ ಎಂದು ಹೇಳುವಂತಿರಲಿಲ್ಲ. ಭೌತಿಕವಾಗಿ ಮೂಡುವ ನಕಾಶೆಗಿಂತ ಮುನ್ನ ಮಾನಸಿಕ ಸಿದ್ಧತೆ ಅಗತ್ಯವೆಂದು ಹೇಳುತ್ತಿದ್ದ. ಒಂದು ನಕಾಶೆಯ ಕೆಲಸ ಮುಕ್ತಾಯವಾದೊಡನೆ ಒಂದು ಔಟಿಂಗ್‌ಗೆ ಹೋಗಿ ಬರುವ ರೂಢಿ ಮಾಡಿಕೊಂಡಿದ್ದ. ಅದರಿಂದ ದೇಹ ಮನಸ್ಸು ನಿರಾಳವಾಗಿ ಒತ್ತಡವನ್ನೆಲ್ಲಾ ಹೊರಹಾಕಿ ಮುಂದಿನ ದಿನಗಳಲ್ಲಿ ಹೊಸ ಸವಾಲು ಸ್ವೀಕರಿಸಲು ಮನಸ್ಸು ಸಜ್ಜಾಗುತ್ತಿತ್ತು. ಈ ರೀತಿ ಹಲವು ಬಾರಿ ರೂಢಿಗತವಾದ ದಿನಚರಿಯಲ್ಲಿ ಭವಿತಾಳ ಆಗಮನವಾಗಿ ಅವರಿಬ್ಬರೂ ಬರುವ ದಿನಗಳಲ್ಲಿ ಕೈ ಹಿಡಿಯಲಿದ್ದರು.

ಮನೆಯಲ್ಲಿ ಅವರ ಮದುವೆಗೆ ವಿರೋಧವೇನೂ ವ್ಯಕ್ತವಾಗದೆ ಮನೆಯವರು ಮಗ ಮದುವೆಯಾಗುವ ನಿರ್ಧಾರ ಕೈಗೊಂಡಿದ್ದೇ ಹೆಚ್ಚೆಂಬ ಭಾವ ತೋರಿಸಿದ್ದರು. ಒಬ್ಬನೇ ಮಗ ರಜತ್ ತಂದೆ ತಾಯಿಯ ಕಣ್ಮಣಿಯಾಗಿದ್ದು ಅವನ ಇಚ್ಛೆಗೆ ವಿರೋಧ ವ್ಯಕ್ತಪಡಿಸುವ ಮನಸ್ಥಿತಿ ಅವರದಾಗಿರಲಿಲ್ಲ. ಅದೇ ವೃತ್ತಿಯ ಹೆಣ್ಣು ಮಗಳಾದ್ದರಿಂದ ವೃತ್ತಿ ಜೀವನದಲ್ಲಿ ಒಟ್ಟಿಗೆ ಕಲೆತಂತೆ ಮನೆಯಲ್ಲೂ ಬೆರೆತು ಸೌಹಾರ್ದಯುತ ಜೀವನ ಸಾಗಿಸುವಳೆಂಬ ಇರಾದೆ ಇತ್ತು. ಮಗ ಈ ನಿರ್ಧಾರ ತೆಗೆದುಕೊಂಡಿದ್ದಾನೆಂದರೆ ಎಲ್ಲಾ ಕೋನಗಳಲ್ಲೂ ಯೋಚಿಸಿರಲೇಬೇಕೆಂದು ಭಾವಿಸಿದರು. ಹರಿಯುವ ನದಿಗೆ ಅಣೆಕಟ್ಟೆ ಕಟ್ಟಲು ಸಿದ್ಧವಿರಲಿಲ್ಲವಾಗಿ ತಮ್ಮ ಒಪ್ಪಿಗೆ ಸೂಚಿಸಿದ್ದರು. ಮನೆ ಮಂದಿ ತನ್ನ ಇಚ್ಛೆಗೆ ಒಪ್ಪಿಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಭವಿತಾಳಿಗೆ ವಿಶೇಷ ಪಾರ್ಟಿಯನ್ನೇ ಕೊಡಿಸಿದ್ದ ರಜತ್. ಮದುವೆಗೆ ಮುಹೂರ್ತದ ದಿನಾಂಕ ನಿಗದಿಪಡಿಸುವ ಕೆಲಸ ಹಿರಿಯರಿಗೇ ಬಿಟ್ಟು ತನ್ನ ತುರ್ತು ಕಚೇರಿ ಕೆಲಸಗಳನ್ನು ಅದಕ್ಕೂ ಮುನ್ನ ಮುಗಿಸುವ ಪಣ ತೊಟ್ಟ.

ಅವನು ಕಳೆದ ಗಳಿಗೆಗಳನ್ನು ಮೆಲುಕು ಹಾಕುತ್ತಾ ತನ್ನ ಡಿಜಿಟಲ್ ನಕ್ಷೆಯಲ್ಲಿ ಪ್ರಮುಖ ಆಗುಹೋಗುಗಳು, ದೈನಂದಿನ ಚಟುವಟಿಕೆಗಳ ತಾಣ ಗುರುತಿಸುತ್ತಿರುವಾಗಲೇ ಅವನ ಮೊಬೈಲ್ ಲೊಕೇಷನ್ ಟ್ರ್ಯಾಕರ್ ಅವನಿಗೆ ಮತ್ತಷ್ಟು ಸುಳಿವುಗಳನ್ನು ನೀಡುತ್ತಾ ಅವನ ಕಾರ್ಯ ಸುಸೂತ್ರಗೊಳಿಸುತ್ತಿತ್ತು. ಅವನು ಹೋಲೊಗ್ರಾಫಿಕ್ ಪ್ರಕಾಶಬಿಂಬದ ಪರದೆಯ ಮೇಲೆ ಕೈಯಾಡಿಸುತ್ತಾ ತನ್ನ ತಂದೆಗೆ ಕರೆ ಮಾಡಿದ.

'ಡ್ಯಾಡ್, ನಿಮ್ಮ ಲೊಕೇಷನ್ ಹಿಸ್ಟರಿ ನನಗೆ ಶೇರ್ ಮಾಡಲು ಸಾಧ್ಯವೇ?'

'ಯಾಕೋ ರಜತ್? ನಿನಗ್ಯಾಕೆ ಬೇಕು ನನ್ನ ಚಟುವಟಿಕೆಗಳ ಹಿಸ್ಟರಿ?'

'ಡ್ಯಾಡ್, ನಾನು ನಮ್ಮ ಮದುವೆ ಸಂದರ್ಭದಲ್ಲಿ ಎಲ್ಲರಿಗೂ ನಮ್ಮ ಜೀವನ ಪಯಣದ ಚಿತ್ರಣ ಮೂಡಿಸಿ ಪ್ರದರ್ಶಿಸುವ ಆಕಾಂಕ್ಷೆ ಇದೆ. ಅದು ಇತರ ಮದುವೆಗಳಿಗಿಂತಲೂ ಭಿನ್ನವಾಗಿರಬೇಕು. ಅದಕ್ಕೆ ನಿಮ್ಮ ಚಟುವಟಿಕೆಗಳ ಹಿನ್ನೆಲೆಯನ್ನು ನನ್ನದಕ್ಕೆ ಸಮೀಕರಿಸಬೇಕಿದೆ. ಹಾಗೆಯೇ ಮಮ್ಮಿದೂ ಬೇಕಿದೆ' ಎಂದಾಗ ಅವನ ತಂದೆ ಯೋಗೇಶ್ವರ್ ಕೆಲಹೊತ್ತು ತನ್ನ ಮಗ ಯಾವ ಸಾಹಸ ಉಪಕ್ರಮಕ್ಕೆ ಕೈ ಹಾಕಿದ್ದಾನೋ ಎಂದು ತಲೆಕೆಡಿಸಿಕೊಂಡರು. ನಂತರ ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲವಲ್ಲ ಎಂದು ಸಮಾಧಾನದಿಂದ ಮಾಹಿತಿ ಹಂಚಿಕೊಂಡರು. ಜೊತೆಗೆ ತನ್ನ ಪತ್ನಿ ಸುಶೀಲಳ ಚಟುವಟಿಕೆಯನ್ನು ಹಂಚಿಕೊಳ್ಳಲು ಮರೆಯಲಿಲ್ಲ.

ಆದರೆ ಮದುವೆಯ ದಿನ ಸಮೀಪಿಸುತ್ತಿರುವಾಗ ರಜತ್‌ನ ಈ ಬಿಜಿ ಕಾರ್ಯ ವಿಧಾನ ಅವರಿಗ್ಯಾಕೋ ಸರಿ ಎನಿಸಲಿಲ್ಲ. ಬಂಧು ಬಾಂಧವರಿಗೆ ವಿವಾಹ ಆಹ್ವಾನ ಪತ್ರಿಕೆ ತಲುಪಿಸುವ ಕಾರ್ಯ ಒಂದು ತಿಂಗಳು ಮುಂಚಿತವಾಗಿಯೇ ಶುರುವಾಗಬೇಕಿದೆ. ಮದುವೆಗೆ ತಯಾರಿ ನಡೆಸುವುದು ಅಷ್ಟು ಸುಲಭವೇನಲ್ಲ. ಎರಡು ಕುಟುಂಬಗಳು ಸೇರಿ ನಡೆಸುವ ಕಾರ್ಯಕ್ರಮದಲ್ಲಿ ಪ್ರಾರಂಭದಿಂದಲೇ ರಜತ್ ಹಾಗೂ ಭವಿತಾ ತೊಡಗಿಸಿಕೊಳ್ಳುವುದು ಅಪೇಕ್ಷಣೀಯವಾಗಿತ್ತು. ಇದರ ಅರಿವಿದ್ದರೂ ರಜತ್ ತನ್ನದೇ ಲೋಕದಲ್ಲಿ ವಿಹರಿಸುತ್ತಾ ಕೈಗೆತ್ತಿಕೊಂಡ ಕೆಲಸವನ್ನು ಪೂರ್ಣಗೊಳಿಸದೆ ಬಿಡುವುದಿಲ್ಲವೆಂದು ಪಣತೊಟ್ಟಂತೆ ಭವಿತಾಳ ಚಟುವಟಿಕೆಗಳ ಲೊಕೇಷನ್ ಹಂಚಿಕೊಳ್ಳಲು ತಿಳಿಸಿದ. ಇವರೆಲ್ಲರ ಚಟುವಟಿಕೆ ಸ್ಥಳ ನಕಾಶೆಯಲ್ಲಿ ಮೂಡುವಾಗ ರಜತ್ ಕೆಲವೊಮ್ಮೆ ಭವಿತಾಳಲ್ಲಿ ಸಮಾಲೋಚನೆ ಮಾಡುತ್ತಾ ತನ್ನ ಆಸೆ ಆಕಾಂಕ್ಷೆಗಳ ಜೊತೆಗೆ ಕನಸುಗಳನ್ನು ಹಂಚಿಕೊಳ್ಳುತ್ತಿದ್ದ. ಭವಿತಾಳಿಗೋ ರಜತ್ ಎಲ್ಲರ ಚಟುವಟಿಕೆಗಳ ಸಮೀಕರಣ ಹೇಗೆ ಮಾಡುತ್ತಿರುವನೆಂದು ತಿಳಿದುಕೊಳ್ಳುವ ಕುತೂಹಲವಾದರೆ ರಜತ್ ಆ ವಿಚಾರ ಬದಿಗಿಟ್ಟು ತನ್ನ ಭವಿಷ್ಯದ ಲೆಕ್ಕಾಚಾರಗಳನ್ನು ಮುಂದಿಡುತ್ತಿದ್ದ.

'ಭವಿತಾ, ನಮ್ಮ ಮ್ಯಾನೇಜರ್ ಆಶಿಶ್ ಅವರಿಗೆ

